**ದಿನಾಂಕಃ 04.02.2025 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ ವಾದಿ ಪರ ಶ್ರೀ .ಎಸ್.ಸಿ.ಎಸ್ ವಕೀಲರಿಂದಃ**

ನನ್ನ ತಾತನ ಹೆಸರು ಕುಳ್ಳೇಗೌಡ ಯಾನೆ ಧರಲಿಂಗಿ ಕುಳ್ಳೇಗೌಡ. ಸದರಿ ಕುಳ್ಳೇಗೌಡರವರಿಗೆ ಕುಳ್ಳನಿಂಗಮ್ಮ, ಜವನಮ್ಮ, ಲಿಂಗೇಗೌಡ, ಸಾಕಮ್ಮ ಮತ್ತು ಶಾಂತಮ್ಮ ಎಂಬ ಮಕ್ಕಳು ಇರುತ್ತಾರೆ. ಸದರಿಯವರಲ್ಲಿ ನನ್ನ ತಂದೆ 3 ನೇ ಪ್ರತಿವಾದಿಯು ಕುಳ್ಳೇಗೌಡರವರ 2 ನೇ ಮಗ ಎಂದರೆ ಸರಿ. ಸದರಿಯವರಲ್ಲಿ ಕುಳ್ಳಲಿಂಗಮ್ಮ, ಲಿಂಗೇಗೌಡ ಮತ್ತು ಸಾಕಮ್ಮರವರು ಮರಣ ಹೊಂದಿರುತ್ತಾರೆ. ಕುಳ್ಳಲಿಂಗಮ್ಮರವರಿಗೆ ಜಯಲಕ್ಷ್ಮಮ್ಮ ಎಂಬ ಒಬ್ಬಳೇ ಮಗಳು ಇರುತ್ತಾರೆ. 6 ರಿಂದ 10 ನೇ ಪ್ರತಿವಾದಿಗಳು ಮೃತ 3 ನೇ ಪ್ರತಿವಾದಿಯ ಮಕ್ಕಳು. ನನಗೆ ಈಗ ಅಂದಾಜು 45 ವರ್ಷ ಆಗಿರುತ್ತದೆ. ನನ್ನ ತಂದೆಯು 3 ವರ್ಷಗಳ ಹಿಂದೆ ಮರಣ ಹೊಂದಿರುತ್ತಾರೆ. ಸಾಕಮ್ಮರವರು ಯಾವುದೇ ಮಕ್ಕಳಿಲ್ಲದೇ ಮರಣ ಹೊಂದಿರುತ್ತಾರೆ.

ದಾವಾ ಅನುಸೂಚಿ ಸ್ವತ್ತುಗಳು ಮೂಲತಃ ನನ್ನ ತಾತ ಕುಳ್ಳೇಗೌಡರವರಿಗೆ ಸೇರಿದ ಆಸ್ತಿಗಳು ಎಂದರೆ ಸರಿಯಲ್ಲ. ನಿಪಿ–3 ರಲ್ಲಿ ಲಿಂಗೇಗೌಡ ಬಿನ್ ಕುಳ್ಳೇಗೌಡ ಎಂದು ನಮೂದಾಗಿದೆ ಎಂದರೆ ಸರಿ. ಸದರಿ ನಿಪಿ–3 ರಲ್ಲಿ 1983–84 ರಲ್ಲಿ ವಿಭಜನೆ ಎಂದು ನಮೂದಾಗಿದೆ ಎಂದರೆ ಸರಿ. ನಿಪಿ–4 ರಿಂದ ನಿಪಿ–18 ರಲ್ಲಿ ನನ್ನ ತಂದೆಯ ಹೆಸರು ನಮೂದಾಗಿದೆ ಎಂದರೆ ಸರಿ. ದಾವಾ ಅನುಸೂಚಿ ಸ್ವತ್ತುಗಳನ್ನು ನನ್ನ ತಾತ ಕುಳ್ಳೇಗೌಡರವರು ತಮ್ಮ ಜೀವಿತಾವಧಿಯಲ್ಲಿ ಸಂಪಾದಿಸಿದ ಆಸ್ತಿಗಳು ಎಂದರೆ ಸರಿಯಲ್ಲ. ದಾವಾ ಅನುಸೂಚಿ ಸ್ವತ್ತುಗಳು ವಾದಿ ಮತ್ತು ಪ್ರತಿವಾದಿಗಳ ಜಂಟಿ ಮಾಲೀಕತ್ವಕ್ಕೆ ಒಳಪಟ್ಟ ಆಸ್ತಿಗಳು ಎಂದರೆ ಸರಿಯಲ್ಲ. ದಾವಾ ಅನುಸೂಚಿ ಸ್ವತ್ತುಗಳಲ್ಲಿ ವಾದಿ ಮತ್ತು ಪ್ರತಿವಾದಿಗಳು ಹಕ್ಕು ಮತ್ತು ಭಾಗ ಹೊಂದಿದ್ದಾರೆ ಎಂದರೆ ಸರಿಯಲ್ಲ. ವಾದಿ ಮತ್ತು ಪ್ರತಿವಾದಿಗಳು ಇದುವರೆಗೂ ಯಾವುದೇ ವಿಭಾಗವಾಗಿಲ್ಲ ಎಂದರೆ ಸರಿಯಲ್ಲ. ಸಾಕ್ಷಿದಾರರು ಮುಂದುವರೆದು ನನ್ನ ತಂದೆಯು ಈ ಹಿಂದೆಯೇ

ವಾದಿಗೆ ಭಾಗ ನೀಡಿದ್ದರು ಎಂದು ನುಡಿಯುತ್ತಾರೆ. ನನ್ನ ತಂದೆಯು ವಾದಿಗೆ ವಿಭಾಗ ನೀಡಿದ್ದ ಬಗ್ಗೆ ಯಾವುದೇ ದಾಖಲಾತಿಗಳು ಇರುವುದಿಲ್ಲ. ಅದೇ ರೀತಿ ನನ್ನ ತಂದೆಯು ವಾದಿಗೆ ಯಾವಾಗ ವಿಭಾಗ ನೀಡಿದ್ದಾರೆ ಎಂದು ನನಗೆ ಗೊತ್ತಿಲ್ಲ. ಸದರಿ ಭಾಗ ನೀಡಿದ ಬಗ್ಗೆ ನನಗೆ ನಿಖರವಾದ ಮಾಹಿತಿ ಇರುವುದಿಲ್ಲ. ಪಿತ್ರಾರ್ಜಿತ ಆಸ್ತಿಗಳಲ್ಲಿ ಬಂದ ಆದಾಯವನ್ನು ನನ್ನ ತಂದೆ 3 ನೇ ಪ್ರತಿವಾದಿಯೇ ಉಪಯೋಗಿಸುತ್ತಿದ್ದರು ಎಂದರೆ ಸರಿಯಲ್ಲ. ದಾವಾ ಅನುಸೂಚಿ ಸ್ವತ್ತುಗಳು ನಮ್ಮ ಪಿತ್ರಾರ್ಜಿತ ಆಸ್ತಿಗಳಾಗಿದ್ದರೂ ಸಹ ನನ್ನ ತಂದೆ 3 ನೇ ಪ್ರತಿವಾದಿಯು ವಾದಿಯ ಗಮನಕ್ಕೆ ಬರದಂತೆ ದಾವಾ ಅನುಸೂಚಿ ಸ್ವತ್ತುಗಳ ಖಾತೆಗಳನ್ನು ತಮ್ಮ ಹೆಸರಿಗೆ ಬದಲಾಯಿಸಿಕೊಂಡಿದ್ದಾರೆ ಎಂದರೆ ಸರಿಯಲ್ಲ. ಪಿತ್ರಾರ್ಜಿತವಾಗಿ ಬಂದ ಆಸ್ತಿಗಳ ಆದಾಯದಿಂದ ನನ್ನ ತಂದೆಯು ದಾವಾ ಅನುಸೂಚಿ ಐಟಂ ನಂ.2, 9, 10, 11, 13 ರಿಂದ 15 ರ ಆಸ್ತಿಗಳನ್ನು ಖರೀದಿಸಿದ್ದಾರೆ ಎಂದರೆ ಸರಿಯಲ್ಲ. ಪಿತ್ರಾರ್ಜಿತ ಆಸ್ತಿಗಳ ಆದಾಯದಿಂದ ಸದರಿ ಆಸ್ತಿಗಳನ್ನು ಖರೀದಿ ಮಾಡಿರುವುದರಿಂದ ಸದರಿ ಆಸ್ತಿಗಳು ವಾದಿ ಮತ್ತು ಪ್ರತಿವಾದಿಗಳ ಒಟ್ಟು ಕುಟುಂಬದ ಆಸ್ತಿಗಳು ಎಂದರೆ ಸರಿಯಲ್ಲ. ವಾದಿಗೆ ಭಾಗ ಕೊಡಬೇಕಾಗುತ್ತದೆ ಎಂಬ ದುರುದ್ದೇಶದಿಂದ ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ, ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ನನ್ನ ಪ್ರತಿವಾದಪತ್ರದ 5 ನೇ ಖಂಡಿಕೆಯಲ್ಲಿ ನಮೂದಿಸಿರುವಂತೆ ನನ್ನ ತಂದೆ 3 ನೇ ಪ್ರತಿವಾದಿಯು ವಾದಿ ಮತ್ತು ಕುಳ್ಳಲಿಂಗಮ್ಮರವರ ವಿವಾಹವನ್ನು ನೇರೆವರೆಸಿದ್ದ ಬಗ್ಗೆ ಮತ್ತು ರೂ.50,000/- ಮೌಲ್ಯದ ಚಿನ್ನದ ಒಡವೆಗಳನ್ನು ನೀಡಿದ್ದ ಬಗ್ಗೆ ಯಾವುದೇ ದಾಖಲಾತಿಗಳು ಇರುವುದಿಲ್ಲ.

**ಮುಂದುವರಿದ ಪಾಟೀಸವಾಲಿಗೆ ಕಾಲಾವಕಾಶ ಕೋರಿದ್ದರಿಂದ ಕಾಲಾವಕಾಶ ನೀಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ನುಡಿದಂತೆ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸ ಇದೆ.,

**ಹೆಚ್ಚುವರಿ ಸಿವಿಲ್ ಮತ್ತು ಜೆ ಎಮ್ ಎಫ್ ಸಿ**
**ನ್ಯಾಯಾಧೀಶರು, ತಿ.ನರಸಿಪುರ.**